ಮಾಡಿ ತೊಂದರೆ ಕೊಡುವುದಕ್ಕೆ ಹೋಗಿದ್ದಾರೆ ಅನ್ನಿಸುತ್ತದೆ. ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ, ಆರಕ್ಷಕ ಎಂಬ ಪದವನ್ನು ಬದಲಾವಣೆ ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ಸಲಹೆಯನ್ನು ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ರಾಮಂಬೋವಿಯವರದು ೩ ಮನೆಗಳು ಇವೆ. ಮಿಕ್ಕದ್ದೇ ೫೨ ಮನೆಗಳು ಇದೆ. ಬಹುಶಃ ಯಾವಾಗಲೂ ರಾತ್ರಿ ವೇಳೆಯಲ್ಲಿ ಹೆಂಗಸರಾದಿಯಾಗಿ ಕುಡಿದುಕೊಂಡು ಗಲಾಟೆ ಮಾಡಿಕೊಂಡು ಹೊಡೆದಾಡುತ್ತಾರೆ. ಈ ಎರಡೂ ಕಡೆಯವರಿಗೂ ಸಣ್ಣ ಒಂದು ಮರವನ್ನು ಕಡಿಯುವ ವಿಷಯದಲ್ಲಿ ಗಲಾಟೆಯಾಗಿದೆ ಕಡಿಮೆ ಜನ ಇರುವ ಅವರು ಹೆಚ್ಚು ಜನರನ್ನು ಸಂಗ್ರಹಿಸಿಕೊಂಡು ಗಲಾಟೆ ಮಾಡಿರುವುದು ನಿಜ. ಸರ್ ಇನ್ಸ್‌ಪೆಕ್ಟರ್ ಹೋಗಿರುವುದು ಗಲಾಟೆಯನ್ನು ತಪ್ಪಿಸುವುದಕ್ಕೋಸ್ಕರ ಹೋಗಿದ್ದಾರೆಯೇ ಹೊರತು ಪ್ರಚೋದನೆ ಮಾಡಲಿಕ್ಕೆ ಹೋಗಿಲ್ಲ. ಅಲ್ಲಿ ಲಾಠಿ ಛಾರ್ಜ್ ಮಾಡದಿದ್ದರೆ ಅನೇಕ ಜನ ಮರಣವನ್ನು ಅಪ್ಪುತ್ತಿದ್ದರು. ಆದ್ದರಿಂದ ಎರಡೂ ಕಡೆಯವರೂ ಕೇಸ್‌ಗಳನ್ನು ಹಾಕಿದ್ದಾರೆ. ಯಾರು ಇದರಲ್ಲಿ ಗಲಾಟೆ ಮಾಡಿದ್ದಾರೆ ಅವರನ್ನು ಕುಡುಗೋಲಿನಿಂದ ಹೊಡೆದಿರುವುದಿಲ್ಲ. ಅದಕ್ಕೋಸ್ಕರ ತಪಾಸಣೆಯನ್ನು ಮಾಡಿದ್ದೇವೆ. ಅಲ್ಲಿ ಅತಿರೇಕವಾಗಿದ್ದರೆ ಬಹುಶಃ ವೈಷಮ್ಯ ಕಾರಣಾಂತರಗುತ್ತದೆ ಗಲಾಟೆಯನ್ನು ತಪ್ಪಿಸುವುದಕ್ಕೋಸ್ಕರ ಹೋಗಿದ್ದಾರೆಯೇ ಹೊರತು ಪ್ರಚೋದನೆ ಮಾಡುವುದಕ್ಕೆ ಹೋಗಿಲ್ಲ. ೨೬ನೇ ತಾರೀಖು ನಿನ್ನೆ ಕೂಡ ಅಲ್ಲಿನ ಎಸ್.ಪಿ. ಅವರೂ ಕೂಡ ಹೋಗಿ ವಿಚಾರಣೆಯನ್ನು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಇವತ್ತು ಇಂಥ ಗಲಾಟೆಗಳು ಈ ಕುಡುಕರ ಮಧ್ಯದಲ್ಲಿ ಆಗುವುದು ಉಂಟು. ಕೆಲವು ಹಳ್ಳಿಗಳಲ್ಲಿ ವ್ಯಾಜ್ಯಗಳು ಉಂಟು. ಅಲ್ಲಿ ತೊಂದರೆ ಆಗದೇ ಇರಲಿ ಎಂದು ಹೋಗಿದ್ದಾರೆಯೇ ಹೊರತು ಪ್ರಚೋದನೆಯನ್ನು ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಬಿ ಬಸವಲಿಂಗಪ್ಪ.—ಅಧ್ಯಕ್ಷರೇ, ದಯಮಾಡಿ ನೋಡಿ. ಎಷ್ಟು ಜನಕ್ಕೆ ತಲೆ ಹೊಡೆದಿದ್ದಾರೆ. ನಿಮ್ಮ ಆರಕ್ಷಕರು ಹೋದ ಮೇಲೆ ಈ ಸಂಭವ ಆಗಿದೆ. ನಾನಂ ಹೇಳುತ್ತಿದ್ದೇನೆ. ನೀವು ಹೋಗದೆ ಇದ್ದರೆ ಅದೂ ಆಗುತ್ತಾ ಇರಲಿಲ್ಲ ಮನೆಯ ಒಳಗಡೆ ಇದ್ದವರನ್ನು ಹೊರಗಡೆ ಕರೆದುಬಿಟ್ಟು ಮಾಡಿಸಿದ್ದೀರಿ ಏತಕ್ಕೆ ? ಮಾನ್ಯ ಗೃಹ ಸಚಿವರ ಹತ್ತಿರ ನನಗೆ ಮಾತನಾಡಲಿಕ್ಕೆ ಸ್ವಲ್ಪ ಸಂಕೋಚ. ತಾವು ದಕ್ಷರಾಗಿ ಜನಗಳಿಗೆ ಕಂಟ್ರೋಲ್ ಮಾಡಿ. ಅವರ ಮಾತನ್ನು ಕೇಳಬೇಡಿ. ನಾನು ಕೊಟ್ಟಿರುವುದನ್ನು ಓದಿ. ಅದು ಪ್ರಚೋದನೆ ಇಲ್ಲದೇ ಆಗುತ್ತದೆಯೇ ನೋಡಿ. ಖೂನಿ ಆದಮೇಲೆ ಮಹಜರ್ ಬರೆಯುವುದಕ್ಕೆ ಹೋಗುತ್ತೀರಿ. ನಮ್ಮ ರಾಜ್ಯದಲ್ಲಿ ಪೋಲೀಸರು ಇದ್ದಾರೋ ಇಲ್ಲವೋ ? ಅಲ್ಲಿ ಪೋಲೀಸರು ನೇತೃತ್ವದಲ್ಲಿ ಹೋದ ಮೇಲೆ ಇಂಥ ಒಂದು ಘಟನೆಯಾಗಿದೆ. ಆ ಘಟನೆಯನ್ನು ತಡೆಯಲಿಕ್ಕೆ ಅವರಿಗೆ ಶಕ್ತಿ ಇಲ್ಲ. ತಡೆದಿದ್ದೇವೆಂದು ಹೇಳುವುದಿಲ್ಲ ಘಟನೆ ಆಗಿ ಹೋಗಿದೆ ಎಂದು ಹೇಳುತ್ತೀರಿ, ಇಂಥ ಒಂದು ನಿಚ್ಚಳವಾಗಿರತಕ್ಕಂಥ ಅಶಕ್ತತನ ತಮ್ಮಲ್ಲಿದೆ. ಇದರಲ್ಲಿ ಯಾರ್ಯಾರು ಇದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನೀವು ತಯಾರಾಗಿದ್ದೀರಾ ?

ಶ್ರೀ ಬಿ. ರಾಚಯ್ಯ - ವಿಚಾರಣೆಯನ್ನು ಮಾಡಿದೆ. ಅವರು ತಪ್ಪಿತಸ್ಥರು ಅಲ್ಲ ಎಂದು ನನಗೆ ವರದಿ ಬಂದಿದೆ.

(೨) ಶ್ರೀ ಶಂಕರಿಕೊಪ್ಪ ಪರಿಶಿತ ಸಮಿತಿಯ ವರದಿ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಶ್ರೀ ಶಂಕರಿಕೊಪ್ಪ ಪರಿಶಿತ ಸಮಿತಿಯ ವರದಿ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ವ್ಯವಸಾಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ (ಕೃಷಿ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ರಾಜ್ಯ ಸರ್ಕಾರಕ್ಕೆ ಆಗಿಂದಾಗ್ಗೆ ಅನೇಕ ರೈತರ ಸಂಘ ಸಂಸ್ಥೆಗಳು ಅವರ ಬೇಡಿಕೆಗಳು ಬಗ್ಗೆ ಮಾನವಿ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ. ಇವುಗಳ ಬಗ್ಗೆ ವಿಷಧವಾಗಿ ಅಭ್ಯಸಿಸಿ, ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು

ವಗಾಡಲು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ ೨ನೇ ಮೇ ೧೯೮೪ ರಂದು ಒಂದು ವರಿಷ್ಠಿತ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ರೈತ ಪ್ರತಿನಿಧಿಗಳನ್ನು ಹಾಗೂ ಕೃಷಿ ತಜ್ಞರನ್ನು ಒಳಗೊಂಡಿದೆ. ಈ ಸಮಿತಿಯನ್ನು ಶ್ರೀ ಶಂಕರಿಕೊಪ್ಪ ಅವರ ಅಧ್ಯಕ್ಷತೆಯಲ್ಲಿ ದಿನಾಂಕ ೯ನೇ ಅಕ್ಟೋಬರ್ ೧೯೮೫ ರಂದು ಪುನರ್ ರಚಿಸಲಾಯಿತು. ಈ ಸಮಿತಿಯ ಕಾರ್ಯ ವ್ಯಾಪ್ತಿಯ ಉಲ್ಲೇಖ ಈ ಕೆಳಕಂಡತಿವೆ.

ಅ) ರೈತರ ಸಮಸ್ಯೆಗಳನ್ನು ಅಭ್ಯಸಿಸುವುದು.

ಆ) ಕೃಷಿ ಉತ್ಪಾದನಾ ವೆಚ್ಚಗಳನ್ನು ಅಭ್ಯಸಿಸಿ, ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡುವುದು.

ಇ) ರೈತರ ಸಮಸ್ಯೆಗಳನ್ನು ಪರಿಹರಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.

ಈ ಸಮಿತಿಯು ದಿನಾಂಕ ೨೫-೧೦-೧೯೮೬ ರಂದು ಒಂದು ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ವರದಿಯಲ್ಲಿ ಸಮಿತಿಯು ಮಾಡಿರುವ ಶಿಫಾರಸ್ಸುಗಳು ಈ ಕೆಳಗಿನಂತಿವೆ.

ಅ) ಕೃಷಿ ಸಾಲಗಳು ಮರು ತಪಶೀಲು ಮಾಡುವುದು. ಮತ್ತು ಸಹಕಾರ ಸಂಸ್ಥೆಗಳು ಹಾಗೂ ವಾಣಿಜ್ಯ ಬ್ಯಾಂಕುಗಳು ಈ ಸಾಲದ ಮೇಲೆ ಹಾಕಿರುವ ಬಡ್ಡಿಯನ್ನು ಮನ್ನಾ ಮಾಡುವುದು.

ಆ) ಕೇಂದ್ರ ಸರ್ಕಾರದೊಡನೆ ಪರ್ಯಾಲೋಚಿಸಿ ರೈತರಿಗೆ ''ಧಾನ್ಯ ಸಾಲ'' ವನ್ನು ಒದಗಿಸುವುದು.

ಇ) ಆಯ್ಕೆಟ್ಟು ಪ್ರದೇಶಗಳ ಹೊರತು ಉಳಿದೆಡೆಯಲ್ಲಿ ನಬಾರ್ಡ್‌ನ ಸಹಾಯದೊಂದಿಗೆ ಸಣ್ಣ ಮತ್ತು ಖಾಸಗಿ ನೀರಾವರಿಯ ಒಂದು ಬೃಹತ್ ಕಾರ್ಯಕ್ರಮವನ್ನು ಪ್ರಾರಂಭಿಸುವುದು ಮತ್ತು ರೈತರು ಅಳವಡಿಸುವ ನೀರಾವರಿ ಪಂಪ್ ಸೆಟ್‌ಗಳು ವಿದ್ಯುಚ್ಛಕ್ತಿ ಪಂಪ್‌ಸೆಟ್ಟುಗಳು, ಸಬ್‌ಮರ್ಸಿಬಲ್ ಪಂಪ್‌ಸೆಟ್ಟುಗಳು ಮತ್ತು ಪೈಪು ಇಂತಹ ಇತರೆ ವಸ್ತುಗಳ ಮೇಲಿನ ಮಾರಾಟ ತೆರಿಗೆ ಹಾಗೂ ಕೇಂದ್ರದ ಎಕ್ಸೈಸ್ ಡ್ಯೂಟಿ ಇವುಗಳನ್ನು ಮನ್ನಾ ಮಾಡುವುದು.

ಈ) ಕೊಳವೆ ಬಾವಿಗೆ ದೊರೆಯುತ್ತಿರುವ ರಿಯಾಯಿತಿಯು ಎಲ್ಲಾ ರೈತರಿಗೂ ಅವರ ಜಮೀನಿನ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಳ್ಳದೇ ದೊರೆಯುವಂತೆ ಮಾಡಬೇಕು.

ಉ) ಸ್ಟಾಂಪ್ ಡೂಟಿಯನ್ನು ಮನ್ನಾ ಮಾಡುವುದು.

ಊ) ಗ್ರಾಮೀಣ ಮಕ್ಕಳಿಗೆ ಬೋಧನಾ ಶುಲ್ಕ ಹಾಗೂ ಪರೀಕ್ಷಾ ಶುಲ್ಕಗಳನ್ನು ಮನ್ನಾ ಮಾಡುವುದು.

ಈ ಮೇಲೆ ಹೇಳಿರುವ ಶಿಫಾರಸುಗಳು ಸರ್ಕಾರದ ಪರಿಶೀಲನೆಯಲ್ಲಿವೆ,

ಶ್ರೀ ಪಂಲ್ಲಿಕಾರ್ಜುನ ಎಂ. ಖರ್ಗೆ. – ಅಧ್ಯಕ್ಷರೇ, ತಾವು ಕೊಟ್ಟಂತಹ ಆರು ಸಲಹೆಗಳಲ್ಲಿ ಎಷ್ಟು ಸಲಹೆಗಳನ್ನು ಒಪ್ಪಿಕೊಂಡು ತಕ್ಷಣವೇ ಇದಕ್ಕೆ ಪರಿಹಾರ ಕೊಡುತ್ತೀರಿ ? ಎರಡನೆಯದಾಗಿ ಈ ಸಮಿತಿಗೆ ಸಂಪೂರ್ಣವಾಗಿ ವರದಿಯನ್ನು ಕೊಡುವುದಕ್ಕೆ ತಾವು ಏನಾದರೂ ಎರಡು ವರ್ಷ ಅಥವಾ ಒಂದು ವರ್ಷ ಎಂದು ಕಾಲಮಿತಿಯನ್ನು ನಿಗದಿ ಮಾಡಿದ್ದೀರಾ ? ಮೂರನೆಯದಾಗಿ ಈ ಸಮಿತಿಯವರು ಇಡಿ ರಾಜ್ಯಾದ್ಯಂತ ತಿರುಗಿ ಎಲ್ಲರಿಗೂ ಅಂದರೆ ಲೆಜಿಸ್‌ಲೇಟರ್ಸ್ ಅವರನ್ನು ಕೂಡ ಭೇಟಿಯಾಗಿ ವರದಿ ಕೊಡಬೇಕೆಂದು ತಾವು ಸಲಹೆ ಸೂಚನೆಗಳನ್ನೇನಾದರೂ ಕೊಟ್ಟಿದ್ದೀರಾ ? ಅಥವಾ ಅವರಿಗೆ ಎಲ್ಲಿಲ್ಲಿ ಅಪ್ಲಿಕೇಷನ್ ಗ್ರಿವೆನ್ಸ್‌ಸ್ ಬರುತ್ತದೆ, ಅದರ ಮೇಲೆ ತೆಗೆದುಕೊಂಡು ವರದಿ ಕೊಡಬೇಕು ಎಂದು ತಾವು ಏನಾದರೂ ಡೈರೆಕ್ಷನ್ ಕೊಟ್ಟಿದ್ದೀರಾ ? ಹೇಗೆ ?.

ಶ್ರೀ ಎಂ ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಈಗ ಅವರನ್ನೆಲ್ಲ ನೇಮಕ ಮಾಡಿದ ಆಜ್ಞೆಯಲ್ಲಿ ಸ್ಪಷ್ಟವಾಗಿ ಇದೆ, ಅವರಿಗೆ ನಿಗದಿಯಾದ ಸಮಯವನ್ನು ಕೊಟ್ಟಿಲ್ಲ. ಅವರಿಗೆ ಕಾಲಕಾಲಕ್ಕೆ ಬರತಕ್ಕಂಥ ಅನೇಕ ತೊಂದರೆಗಳು ಏನು ಇದೆ, ಆ ತೊಂದರೆಗಳ ಕುರಿತಾಗಿರಬಹುದು, ಇಲ್ಲವೇ ಸರ್ಕಾರದವರಿಗೆ ಹೊರಗಿನಿಂದ ಬರತಕ್ಕಂಥ ಮನವಿಗಳು ಆಗಿರಬಹುದು, ಅದು ರೈತರಿಗೆ ಸಂಬಂಧಪಟ್ಟ

ಸಮಸ್ಯೆಗಳು ಆಗಿರಬಹುದು, ಆ ಸಮಸ್ಯೆಗಳನ್ನೆಲ್ಲಾ ಪರಿಣಿತ ಸಮಿತಿಯ ಜೊತೆ ಯೋಚನೆ ಮಾಡಿ ಶಿಫಾರಸ್ಸುಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಇದಕ್ಕೆ ೨೭-೧೨-೮೫ನೇ ತಾರೀಖಿನಲ್ಲಿ ಮಾಡಿರ ತಕ್ಕಂಥ ಆಜ್ಞೆಯನ್ನು ಸನ್ಮಾನ್ಯ ಸದಸ್ಯರ ಅವಗಾಹನೆಗೆ ತರುತ್ತೇನೆ. ಈ ಪರಿಣಿತ ಸಮಿತಿ ಅವರು ಎಲ್ಲಾ ಕಡೆಗೆ ಕಾಲಕಾಲಕ್ಕೆ ಬೇಕಾಗಿರತಕ್ಕಂಥ ಮಾಹಿತಿಗಳನ್ನು ತರಿಸಿಕ್ಕೊಬಹುದು. ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಸಮಸ್ಯೆಗಳನ್ನು ನೇರವಾಗಿ ಸಂಬಂಧಪಟ್ಟಿರತಕ್ಕಂಥ ರೈತರ ಜೊತೆಗೆ ವ್ಯವಹರಿಸಬಹುದು. ಆ ಸಮಸ್ಯೆ ಪ್ರಾತಿನಿಧಿಕ ಸಂಘಸಂಸ್ಥೆಗಳೀಂದ ಬಂದಿರಬಹುದು. ಶಾಸಕರಿಂದ ಬಂದಿರಬಹುದು. ಅವರ ಜೊತೆಗೆ ಸಂಪರ್ಕ ಮಾಡುವುದರ ಜೊತೆಗೆ ಜಿಲ್ಲಾಧಿಕಾರಿಗಳ ಜೊತೆಗೆ ಕೂಡ ಸಂಪರ್ಕ ಮಾಡಿ ಅವರಿಗೆ ಬೇಕಾಗಿರತಕ್ಕಂಥ ಮಾಹಿತಿಗಳನ್ನು ಸಂಗ್ರಹಿಸಿ ತೆಗೆದುಕೊಂಡು ವರದಿಯನ್ನು ಸಲ್ಲಿಸಬೇಕಾಗಿದೆ. ಅನೇಕ ಜನರ ಸಂಕಷ್ಟಗಳಿಗೆ ಪರಿಹಾರ ಮಾಡುವ ವಿಚಾರದಲ್ಲಿ ಅವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿದೆ. ಅವರು ಈ ಪ್ರಕಾರ ಕರ್ನಾಟಕ ರಾಜ್ಯಾದ್ಯಂತ ಸಂಚಾರ ಮಾಡಿ ತಮ್ಮ ಇತಿಮಿತಿಯಲ್ಲಿ ಬಂದಿರತಕ್ಕಂಥ ಮಾಹಿತಿಯ ಆಧಾರಗಳ ಮೇಲೆ ತಾತ್ಕಾಲಿಕ ವರದಿಯನ್ನು ತಾ ೨೫-೧-೮೬ ರಂದು ಸರ್ಕಾರದ ಅವಗಾಹನೆಗೆ ಕಳುಹಿಸಿಕೊಟ್ಟಿದ್ದಾರೆ. ಈ ಕೃಷಿ ಇಲಾಖೆ ಅಲ್ಲದೇ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕಂಥ ಶಿಫಾರಸ್ಸುಗಳೂ ಕೂಡ ಅದರಲ್ಲಿದೆ. ಬೇರೆ ಬೇರೆ ಇಲಾಖೆಯವರು ಈ ಶಿಫಾರಸ್ಸಿಗೆ ಅನುಗುಣವಾಗಿರತಕ್ಕಂಥ ಪ್ರತಿಕ್ರಿಯೆ ಯನ್ನು ಒಪ್ಪುತ್ತಾರೋ ಇಲ್ಲವೋ ಎನ್ನುವ ವಿಚಾರಗಳ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕಂಡುಹಿಡಿಯಬೇಕೆಂದು ನಾವು ಈಗಾಗಲೇ ಬೇರೆ ಬೇರೆ ಇಲಾಖೆಗಳಿಗೆ ಅದನ್ನು ಕಳುಹಿಸಿಕೊಟ್ಟಿದ್ದೇವೆ. ಅವರಿಂದ ಉತ್ತರ ಬಂದ ನಂತರ ಆ ವರದಿಯ ಮೇಲೆ ತೀರ್ಮಾನವನ್ನು ಕೈಗೊಳ್ಳಲಾಗುವುದು ಎಂದು ಅರಿಕೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಯ್ಯರ್.—ಮಾನ್ಯರಿಗೆ ಉದ್ದವಾದ ಉತ್ತರ ಕೊಟ್ಟರು. ಬಹಳ ಸಂತೋಷ. ಆದರೆ ಸ್ಪೆಸಿಫಿಕ್ಕಾಗಿ ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಈ ಸಮಿತಿ ಪರ್ಮನೆಂಟ್ ಸಮಿತಿಯೋ ಹೇಗೆ? ಅಪ್ಲಿಕೇಷನ್‌ಗಳು, ಗ್ರಿವೆನ್ಸಿಸ್ ಏನು ಬರುತ್ತದೆ ಅದನ್ನು ಈ ಸಮಿತಿ ಪರೀಶಿಲನೆ ಮಾಡಿ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಈ ಸಮಿತಿಯನ್ನು ಪರ್ಮನೆಂಟಾಗಿ ಇಡುತ್ತಿರೋ ಹೇಗೆ ಅವರು ಕೊಟ್ಟರುವ ಆರು ಸಲಹೆಗಳ ಬಗ್ಗೆ ಯಾವುದಾದರೂ ತೀರ್ಮಾನವನ್ನು ಎಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತೀರಿ? ಸ್ಪಷ್ಟವಾಗಿ ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ, ಈ ಸಮಿತಿಗೆ ಇಷ್ಟೇ ದಿವಸದಲ್ಲಿ ವರದಿಯನ್ನು ಒಪ್ಪಿಸಬೇಕೆಂದು ಹೇಳಿಲ್ಲ. ಏತಕ್ಕೆಂದರೆ ಯಾವ ಯಾವ ಸಮಸ್ಯೆಗಳು ಯಾವ ಯಾವ ಕಾಲದಲ್ಲಿ ಉದ್ಭವಿಸುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇದು ಸ್ಥಾಯಿ ಸಮಿತಿಯಾಗಿಯೂ ಕೆಲಸ ಮಾಡಬೇಕು. ಈ ಸಮಿತಿಗೆ ಸಂಬಂಧಿಸಿದಂತೆ May ೧೯೮೬ರಲ್ಲಿ ಆಗಿರತಕ್ಕ ಆದೇಶವನ್ನು ನೋಡುವುದಾದರೆ—

"The State Government are receiving representations from the farmers from time to time on their various demands for consideration of the State Government These demands are coming under the purview of the State and Central Governments. The State Govenment have met several demands of the farmers keeping in view the financial position. While certain demands like decreasing prices of agricultural inputs and fixing up of remunerative prices for agricultural produces are not coming within the purview of the State Government, on such demands the State Government can only make recommendations In order to have a detailed study of these demands and to make suitable recommendations to the State Government and the Central Government, it is proposed to constitute an Expert

Committee comprising of both farmers as well as experts in agricultural field."

ಈ ತರಹದ ಉದ್ದೇಶವನ್ನು ಇಟ್ಟುಕೊಂಡು ಕೆಳಕಾಣಿಸಿರತಕ್ಕ ಮಂಹನೀಯರ ಒಂದು ಸಮಿತಿಯನ್ನು ನಾವು ಮಾಡಿದ್ದೇವೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಅಧ್ಯಕ್ಷರೇ, ನಮಗೆ ಅವಕಾಶ ಕೊಡಬೇಕು. ಏಕೆಂದರೆ...

ಅಧ್ಯಕ್ಷರು.—ಧರ್ಮಸಿಂಗ್ ಅವರೇ ದಯವಿಟ್ಟು ಕೂತ್ಕೊಳ್ಳಿ, ತಾವು ಮಂತ್ರಿಯಾಗಿ ಕೆಲಸ ಮಾಡಿರುವವರು. ನಿಮಗೆ ಗೊತ್ತಿದೆ. ಕಾಲಿಂಗ್ ಅಟೆನ್‌ಷನ್‌ನಲ್ಲಿ ನಿಮಗೆ ಅವಕಾಶ ಇಲ್ಲ. ನೀವೇನಾದರೂ ಕೇಳಿದರೆ ಉತ್ತರ ಹೇಳಬೇಡಿ ಎಂದು ಹೇಳುತ್ತೇನೆ. ನೀವು ಬೇಕಾದರೆ ಖಾರ್ಗೆಯವರಿಗೆ ಹೇಳಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಏಕೆ ?

ಅಧ್ಯಕ್ಷರು.—ಮಾನ್ಯ ಖಾರ್ಗೆಯವರಿಗೆ ಚೀಟಿ ಬರೆದುಕೊಟ್ಟು ಇಂಥದನ್ನು ಕೇಳಿ ಎಂದು ಹೇಳಿ. ರೂಲ್ಸ್ ಪ್ರಕಾರ ನೀವು ಕೇಳುವಹಾಗಿಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ಸಮಿತಿಯನ್ನು ಪರ್ಮನೆಂಟಾಗಿ ಮಾಡಿದ್ದಾರೆ ಯಾವ ಕಾನೂನಿನ ಪ್ರಕಾರ ಮಾಡಿದ್ದೀರಿ ? ಸ್ಪ್ಯಾಚುಟರಿ ಬಾಡಿಯಾಗಿ ಮಾಡಿ ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟಿದ್ದೀರಾ ? ಕೊಟ್ಟಿದ್ದರೆ ಅದರ ಕೆಳಗೆ ಬರತಕ್ಕದ್ದನ್ನು ನೋಡಿಕೊಂಡು ಒಂದು ಪರದಿಯನ್ನು ತಯಾರು ಮಾಡಬೇಕಾಗುತ್ತದೆ. ವರದಿ ಕೊಡಬೇಕಾದರೆ ಟೈಂ ಲಿಮಿಟ್ ಹಾಕಲೇ ಬೇಕಾಗುತ್ತದೆ. ಇಲ್ಲದೇ ಹೋದರೆ ಯಾವುದಾದರೂ ರೀತಿಯಲ್ಲಿ ಸ್ಪ್ಯಾಚುಟರಿ ಬಾಡಿ ಮಾಡಿ ಕಾನೂನು ಪ್ರಕಾರ ಪರ್ಮನೆಂಟ್ ಮಾಡಬೇಕಾಗುತ್ತದೆ. ಸುಮ್ಮನೆ ಯಾವಾಗಲೂ ಗ್ರಿವೆನ್ಸಸ್ ಬರುತ್ತದೆ ಎಂದು ಕಂಟಿನ್ಯೂ ಮಾಡಿದರೆ ಏನರ್ಥ ? ಯಾವ ಕಾನೂನಿನ ಪ್ರಕಾರ ಈ ಬಾಡಿಯನ್ನು ತಾವು ಕಾನ್‌ಸ್ಟಿಟ್ಯೂಟ್ ಮಾಡಿದ್ದೀರಿ ? ಒಂದು ವೇಳೆ ಪಂಐಂದುಪರೆಸಬೇಕಾಗಿದ್ದರೆ ಕೂಡ ಯಾವ ಕಾನೂನಿನ ಕೆಳಗೆ ಮಾಡುತ್ತೀರಿ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ – ಒಂದು ವರ್ಷದಲ್ಲಿ ಎಷ್ಟೆಷ್ಟು ಪರಿಹಾರ ಮಾಡಿದ್ದಾರೆ ಹೇಳಲಿ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನನಲ್ಲಿ ಮತ್ತೊಬ್ಬರಿಗೆ ಕೇಳುವುದಕ್ಕೆ ಅವಕಾಶ ಇಲ್ಲಿ. ಖಾರ್ಗೆಯವರಿಗೆ ಚೀಟಿ ಬರೆದುಕೊಟ್ಟು ಇಂಥದ್ದು ಕೇಳಿ ಎಂದು ಹೇಳಿ. ಇಲ್ಲದಿದ್ದರೆ ನೀವೇ ಒಂದು ಕಾಲಿಂಗ್ ಅಟೆನ್‌ಷನ್ ನಾಳೆ ಹಾಕಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ಕಮಿಟಿ ಮಾಡಿ ಈಗಾಗಲೇ ಎರಡು ವರ್ಷ ಆಗಿದ್ದು ೨೫-೧೨-೮೮ ರಲ್ಲಿ ಒಂದು ಇಂಟೀರಿಯಂ ರಿಪೋರ್ಟ್ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಹೇಳಿದ್ದು ಟರ್ಮ್ಸ್ ಆಫ್ ರೆಫರೆನ್ಸ್ ಜೊತೆಗೆ ಡೆಫನೆಟ್ ಪೀರಿಯಡ್ ಹಾಕಬೇಕು. ನಂತರ ಬೇಕಾದರೆ ಎಕ್ಸ್‌ಟೆಂಡ್ ಮಾಡ ಬಹುದು. ಈ ಸಮಿತಿ ಪರ್ಮನೆಂಟಾಗಿರುತ್ತದೆ ಎಂಬ ಭಾವನೆಯನ್ನು ಪಂಂತ್ರಿಗಳು ಸದನಕ್ಕೆ ಕೊಡುತ್ತಿದ್ದಾರೆ. ಈ ರೀತಿ ಮಾಡುವುದಾದರೆ ಯಾವ ಕಾನೂನಿನ ಕೆಳಗೆ ಮಾಡುತ್ತೀರಿ ಹೇಳಿ.

ಶ್ರೀ ಎಂ. ಪಿ ಪ್ರಕಾಶ್.—ಸನ್ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದಂ ಕೊಳ್ಳತಕ್ಕ ಅನೇಕ ನಿರ್ಣಯಗಳಿಂದ ರೈತರಿಗೆ ತೊಂದರೆಯಾಗಿದ್ದರೆ, ರೈತರ ಸಮಸ್ಯೆಗಳನ್ನು ಪರಿಹರಿಸು ವುದಕ್ಕೆ ಸಾಧ್ಯವಿಲ್ಲದ ಸಂದರ್ಭ ಬಂದಾಗ, ಪರಿಣತರ ಸಮಿತಿ ಕಾಲಕಾಲಕ್ಕೆ ಸರಿಯಾಗಿ ಪರಿಶೀಲಿಸಿ ವರದಿಯನ್ನು ಕೊಡಬೇಕೆಂಬ ಮೂಲ ಉದ್ದೇಶದಿಂದ ಸಮಿತಿ ಮಾಡಿದ್ದೇವೆ. ಕಾಲಮಿತಿಯನ್ನು ಹಾಕಿ ಸ್ಪ್ಯಾಚುಟರಿ ಅಧಿಕಾರ ಕೊಡದಿದ್ದರೆ ತೊಂದರೆಯಾಗುತ್ತದೆ ಎಂದು ಅವರು ಹೇಳುತ್ತಿದ್ದಾರೆ. ಆ ದೃಷ್ಟಿಕೋನದಿಂದ ನಾವು ಪರಿಶೀಲನೆ ಮಾಡಿಲ್ಲ. ತಾಂತ್ರಿಕವಾಗಿ ಕಾನೂನಿನ ಅಡೆತಡೆ ಇದ್ದರೆ ಖಂಡಿತ ಅದನ್ನು ಪರಿಶೀಲನೆ ಮಾಡುತ್ತೇವೆ. ೧೯೮೪ನೇ ಇಸವಿಯಲ್ಲಿ ಇದನ್ನು ಸ್ಥಾಪಿಸಿದ್ದರೂ ಕೂಡ ನನ್ನ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಸಮಿತಿ ತಾತ್ಕಾಲಿಕ ವರದಿಯನ್ನು ಸರ್ಕಾರದ ಅವಗಾಹನೆಗೆ ಕಳುಹಿಸಿದೆ. ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತಿದೆ. ಅದರ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ. ಈ

ತಾತ್ಕಾಲಿಕ ವರದಿಯ ಜೊತೆಗೆ ಶ್ರೀ ಸಂಕ್ರಿಕೊಪ್ಪ ಅವರ ಅಧ್ಯಕ್ಷತೆಯಲ್ಲಿ ಪುನರ್‌ರಚಿಸಿರತಕ್ಕ ಸಮಿತಿ ಕೂಡ ದಿನಾಂಕ ೨೫-೧-೮೬ರಲ್ಲಿ ತಾತ್ಕಾಲಿಕ ಸಮಿತಿಯನ್ನು ಸಲ್ಲಿಸಿದ್ದು ಅದರ ಬಗ್ಗೆ ಕೂಡ ಬೇರೆ ಬೇರೆ ಇಲಾಖೆಗಳ ಜೊತೆ ಸಮಾಲೋಚನೆ ಮಾಡಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ...

ಅಧ್ಯಕ್ಷರು —ಹೇಳ್ತಿದ್ದೀರಲ್ಲ ಮತ್ತೆ ಏನು ಹೇಳುತ್ತೀರಿ ? ತಾವೂ ಮಂತ್ರಿಯಾಗಿ ಕೆಲಸ ಮಾಡಿರುವವರು. ತಮಗೆ ಗೊತ್ತಿದೆ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಈಗಾಗಲೇ ಒಂದು ವರದಿಯನ್ನು ಅವರ ಅಧ್ಯಕ್ಷತೆಯಲ್ಲಿ ಕೊಟ್ಟಿದ್ದಾರೆ. ಅದೂ ಪರಿಶೀಲನೆಯಲ್ಲಿದೆ. ಸಂಕ್ರಿಕೊಪ್ಪ ಅದರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿ ಕೊಟ್ಟ ತಾತ್ಕಾಲಿಕ ವರದಿಯೂ ಪರಿಶೀಲನೆಯಲ್ಲಿದೆ. ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡುವುದು, ರಿಪೋರ್ಟ್ ತೆಗೆದುಕೊಂಡು ಪರಿಶೀಲನೆಯಲ್ಲಿಡುವುದೂ ಆಗಿದೆ. ಅದಕ್ಕಾಗಿಯೇ ಹೇಳಿದ್ದು ಉಚಿತವಾಗಿ ಹೇಳಿ ಎಂದು. ಮೂರು ತಿಂಗಳೊಳಗಾಗಿ ಎಗ್ಸಾಮಿನ್ ಮಾಡಿ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಅಥವಾ ನಾಲ್ಕು ತಿಂಗಳೊಳಗಾಗಿ ತೆಗೆದುಕೊಳ್ಳುತ್ತೇವೆ. ಈ ತರಹ ಯಾವುದಾದರೂ ಹೇಳಿ. ಸಂಕ್ರಿಕೊಪ್ಪ ಅವರು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನೂ ಕೂಡ ಎಷ್ಟು ದಿವಸದಲ್ಲಿ ಅಕ್ಸೆಪ್ಟ್ ಅಥವಾ ರಿಜೆಕ್ಟ್ ಮಾಡುತ್ತೀರಿ ? ಉಚಿತವಾಗಿ ಏನಾದರೂ ಹೇಳಿದ್ದಿದ್ದರೆ ಸಮಿತಿ ವರದಿಗಳಿಗೆ ಸ್ಯಾಂಕ್ಟಿಟಿ ಏನು ಬರುತ್ತದೆ ? ಉಪಯೋಗ ಏನಿರುತ್ತದೆ ?

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ಹೇಳಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರೈತರ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ ಎಂದು ಹೇಳುತ್ತೀರಿ. ಇದರ ಬಗ್ಗೆ ಹೇಳಿ.

ಶ್ರೀ ಎಂ. ಪಿ. ಪ್ರಕಾಶ್.—ಸಭಾಧ್ಯಕ್ಷರೆ, ಬಹು ಮುಖ್ಯವಾದ ಪ್ರಶ್ನೆಯನ್ನು ಖಾರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ನಾನು ಕೊಟ್ಟಿರತಕ್ಕ ತಾತ್ಕಾಲಿಕ ವರದಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಚರ್ಚಿಸಿ ಮಾಡಬೇಕಾದ ನಿರ್ಧಾರಗಳಿವೆ. ಗೋಧಿ, ಭತ್ತ, ಜೋಳ ಮತ್ತು ರಾಗಿ ಈ ಬೆಳೆಗಳಿಗೆ ಸಂಬಂಧಪಟ್ಟ ಹಾಗೆ ವರದಿಯನ್ನು ಕಳಂಹಿಸಿಕೊಟ್ಟಿದ್ದೇವೆ, ಇದರಲ್ಲಿ ರಾಜ್ಯ ಸರ್ಕಾರದವರು ಏಕ ಪಕ್ಷೀಯವಾಗಿ ನಿರ್ಧಾರ ತೆಗೆದಂಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರಂ ತೆಗೆದಂಕೊಳ್ಳಬೇ ಕಾಗುತ್ತದೆ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅವರ ಜೊತೆ ಸಮಾಲೋಚನೆ ಮಾಡಿ ವ್ಯವಹಾರವನ್ನು ಬಗೆಹರಿಸಬೇಕಾಗುತ್ತದೆ. ರಾಜ್ಯ ಸರ್ಕಾರದ ಪಾತ್ರ ಇದರಲ್ಲಿ ಗೌಣವಾದುದು ಸಂಕ್ರಿಕೊಪ್ಪ ಸಮಿತಿ ಕೊಟ್ಟಿರತಕ್ಕ ತಾತ್ಕಾಲಿಕ ವರದಿ ೨೫-೧-೮೬ರಲ್ಲಿ ನಮಗೆ ಬಂದಿದೆ. ಬೇರೆ ಬೇರೆ ಇಲಾಖೆಗಳ ಜೊತೆ ಸಮಾಲೋಚನೆ ಮಾಡಿ ಸಲಹೆಗಳನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಕಳಂಹಿಸಿಕೊಟ್ಟಿದ್ದೇವೆ. ಅಲ್ಲಿಂದ ವರದಿ ಬಂದಮೇಲೆ ಕೂಡಲೇ ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂಬ ಭರವಸೆ ಕೊಡುತ್ತೇನೆ.

ಅಧ್ಯಕ್ಷರು.—ಜಯಕುಮಾರ್ ಅವರೇ, ನಿಮ್ಮ ಕಾಲಿಂಗ್ ಅಟೆನ್‌ಷನ್ ನಾಳೆ ತೆಗೆದುಕೊಳ್ಳುತ್ತೇನೆ ನಾಳೆ ಉತ್ತರ ಕೊಡುತ್ತಾರೆ.

ನಿಯಂಮ ೫೩ಳಿರ ಮೇರೆಗೆ

(೧) ರಸ್ತೆ ತಿರುವು ಮಂತ್ತು ಉಬ್ಬುಗಳಲ್ಲಿ ಸೂಚನೆ ಫಲಕಗಳನ್ನು ಹಾಕಂವುದು.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೆ. ರಾಜ್ಯದಲ್ಲಿನ ರಸ್ತೆಗಳಲ್ಲಿ ಜನಸಂದಣಿ ಇರುವ ಪ್ರದೇಶಗಳಲ್ಲಿ ಮತ್ತು ರಸ್ತೆಗಳನ್ನು ದಾಟುವ ಸ್ಥಳಗಳಲ್ಲಿ ವಾಹನಗಳನ್ನು ನಿಯಂಂತ್ರಿಸಿ ಅಪಘಾತಗಳನ್ನು ತಪ್ಪಿಸಲು ರಸ್ತೆ ದುಬ್ಬುಗಳನ್ನು ಹಾಕಲಾಗಿದ್ದು ಅನೇಕ ರಸ್ತೆಗಳಲ್ಲಿ ಉಬ್ಬುಗಳ ಹತ್ತಿರ ಯಾವುದೇ ರೀತಿಯ ಸಿಗ್ನಲ್‌ಗಳಿಲ್ಲದೆ ಈ ದುಬ್ಬರಗಳಿಂದ ಅಪಘಾತಗಳು ಆಗುತ್ತಿರುವುದು ಕಂಡಂ ಬರುತ್ತಿದೆ. ಅನೇಕ ಕಡೆಗಳಲ್ಲಿ ರಸ್ತೆ ಉಬ್ಬುಗಳ ಹತ್ತಿರ ಸಿಗ್ನಲ್ ಲೈಟ್ಸ್ ಅಥವಾ ಬಿಳಿ ಪಟ್ಟಿಗಳನ್ನು ಹಾಕಲಾಗಿದೆ. ಆದರೆ ರಾಜ್ಯದ ಬಹುತೇಕ ರಸ್ತೆಗಳಲ್ಲಿ ಹಾಕಲಾಗುವುದಿಲ್ಲ. ಆದ್ದರಿಂದ ಅಂಥ ಸ್ಥಳಗಳಲ್ಲಿ ಸಿಗ್ನಲ್ ಲೈಟುಂ